# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 408 |
| ಸದಸ್ಯರ ಹೆಸರು | : | ಶ್ರೀ.ಎಂ.ನಾರಾಯಣಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 15.12.2021 |
| ಉತ್ತರಿಸುವ ಸಚಿವರು | : | ಪಶುಸಂಗೋಪನೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿರುವ ಒಟ್ಟು ಗ್ರಾಮೀಣ ಹಾಗೂ ತಾಲ್ಲೂಕು ಮಟ್ಟದ ಪಶು ವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ ಎಷ್ಟು; ಈ ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗ್ರಾಮೀಣ ಹಾಗೂ ತಾಲ್ಲೂಕು ಮಟ್ಟದ ಪಶು ವೈದ್ಯಕೀಯ ಆಸ್ಪತ್ರೆಗಳ ವಿವರ ಈ ಕೆಳಕಂಡಂತಿದೆ. (ಜಿಲ್ಲಾವಾರು ವಿವರವನ್ನು **ಅನುಬಂಧ -1** ರಲ್ಲಿ ನೀಡಲಾಗಿದೆ)<br><br>ಕ್ರ.ಸಂ \| ವಿವರ \| ಸಂಖ್ಯೆ<br>1 \| ಗ್ರಾಮೀಣ ಪಶು ವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ \| 3830<br>2 \| ತಾಲ್ಲೂಕು ಮಟ್ಟದ ಪಶು ವೈದ್ಯಕೀಯ ಆಸ್ಪತ್ರೆಗಳ ಸಂಖ್ಯೆ \| 176<br>3 \| ಸಂಚಾರಿ ಪಶು ಚಿಕಿತ್ಸಾಲಯ ಸಂಖ್ಯೆ \| 176<br> \| ಒಟ್ಟು \| 4182<br><br>ಪಶುವೈದ್ಯಕೀಯ ಸಂಸ್ಥೆಗಳಲ್ಲಿ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ. ಇಲಾಖೆಗೆ ಮಂಜೂರಾದ, ಭರ್ತಿ ಹಾಗೂ ಖಾಲಿ ಹುದ್ದೆಗಳ ವಿವರಗಳನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ. |
| ಆ) | ರಾಜ್ಯದ ಗಡಿರೇಖೆಗಳಲ್ಲಿ ಇರುವ ನೂರಾರು ಹಳ್ಳಿಗಳ ಜನರು ಸಂಪೂರ್ಣ ಹೈನುಗಾರಿಕೆಯನ್ನು ತಮ್ಮ ನಿತ್ಯ ಕಸುಬನ್ನಾಗಿಸಿ ಕೊಂಡಿದ್ದು ಗಡಿಭಾಗದಲ್ಲಿ ಇವೆ ಎಂಬ ಕಾರಣದಿಂದ ಅಂತಹ ಗ್ರಾಮೀಣ ಪ್ರದೇಶಗಳಲ್ಲಿ ಪಶು ಚಿಕಿತ್ಸಾಯಲಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಗಾಮೀಣ ಪ್ರದೇಶದಲ್ಲಿ ಪಶು ಚಿಕಿತ್ಸಾಲಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. |

| | | |
|---|---|---|
| ಇ) | ಒಂದು ಕಡೆ ಪಶು ಚಿಕಿತ್ಸಾಲಯಗಳ ಕೊರತೆ ಇದ್ದು ಇನ್ನೊಂದು ಕಡೆ ಸೂಕ್ತ ಸಿಬ್ಬಂದಿಗಳ ಕೊರತೆಯಿಂದಾಗಿ ಗ್ರಾಮೀಣ ಭಾಗದ ರೈತರು ತೊಂದರೆ ಅನುಭವಿಸುತ್ತಿದ್ದ ಈ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; ಯಾವ ಕಾಲಮಿತಿಯೊಳಗೆ ಈ ಕೊರತೆಯನ್ನು ಸರಿದೂಗಿಸಲಾಗುವುದು ? | ಪ್ರಸ್ತುತ ಖಾಲಿ ಇರುವ ಪಶುವೈದ್ಯರ ಹುದ್ದೆಗಳಿಗೆ ಅಧಿಕ ಪ್ರಭಾರದ ವ್ಯವಸ್ಥೆ ಮಾಡಲಾಗಿದೆ. ಕಲ್ಯಾಣ ಕರ್ನಾಟಕ ಪ್ರದೇಶ ಭಾಗದಲ್ಲಿ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ನೇಮಕಾತಿ ಮಾಡುವ ಸಂಬಂಧ 47 ಪಶುವ್ಯದ್ಯಾಧಿಕಾರಿಗಳ ಆಯ್ಕೆ ಮಾಡಲಾಗಿದ್ದು, ಈ ಪೈಕಿ 35 ಅಭ್ಯರ್ಥಿಗಳಿಗೆ ಈಗಾಗಲೇ ನೇಮಕಾತಿ ಆದೇಶ ನೀಡಲಾಗಿರುತ್ತದೆ. ಉಳಿದ 12 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡುವ ಪ್ರಕ್ರಿಯೆ ಚಾಲನೆಯಲಿದೆ. ಪಶುವೈದ್ಯಕೀಯ ಪರೀಕ್ಷಕರ 32 ಹುದ್ದೆಗಳನ್ನು ಮತ್ತು ಪಶುವೈದ್ಯಕೀಯ ಸಹಾಯಕರ 83 ಹುದ್ದೆಗಳನ್ನು ಭರ್ತಿ ಮಾಡಲು ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.<br><br>ಉಳಿದಂತೆ 900 ಪಶುವೈದ್ಯಾಧಿಕಾರಿಗಳ ಹುದ್ದೆಯನ್ನು ತುಂಬುವ ಪ್ರಸ್ತಾವನೆಯು ಆರ್ಥಿಕ ಇಲಾಖೆಯ ಪರಿಶೀಲನೆಯಲ್ಲಿದೆ. ಆರ್ಥಿಕ ಇಲಾಖೆ ಸಹಮತಿ ನೀಡಿದ ನಂತರ ಖಾಲಿ ಇರುವ ಪಶುವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ವಹಿಸಲಾಗುವುದು.<br><br>ಇಲಾಖೆಯಲ್ಲಿ ಖಾಲಿ ಇರುವ "ಡಿ" ದರ್ಜೆ ಹುದ್ದೆಗಳಿಗೆದುರಾಗಿ ಈಗಾಗಲೇ ಒಟ್ಟು 2256 ಹುದ್ದೆಗಳನ್ನು ಮತ್ತು ಖಾಲಿ ಇರುವ ವಾಹನ ಚಾಲಕರ ಹುದ್ದೆಗಳಿಗೆದುರಾಗಿ ಒಟ್ಟು 177 ಹುದ್ದೆಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ಸೇವೆ ಪಡೆಯಲಾಗುತ್ತಿದೆ.<br><br>ಇಲಾಖೆಯಲ್ಲಿ ಪಶುಚಿಕಿತ್ಸಾಲಯಗಳ ಕೊರತೆ ಇದ್ದು ಈ ಕೊರತೆ ನೀಗಿಸಲು ಹೊಸ ಪಶುಚಿಕಿತ್ಸಾಲಯ ಪ್ರಾರಂಭಿಸುವ ಕಾರ್ಯಕ್ರಮ ಪರಿಶೀಲನೆಯಲ್ಲಿರುತ್ತದೆ. ಸದ್ಯ ಅವಶ್ಯಕ ಚಿಕಿತ್ಸೆಗಾಗಿ ಆಯ್ದ ಗ್ರಾಮಗಳಲ್ಲಿ ಸಂಚಾರಿ ಪಶು ಚಿಕಿತ್ಸಾಲಯಗಳ ವ್ಯವಸ್ಥೆ ಮಾಡಲಾಗಿದೆ. |

ಸಂ: ಪಸಂಮೀ ಇ-178 ಪಸಸೇ 2021

(ಪ್ರಭು.ಬಿ.ಚವ್ಹಾಣ್)
ಪಶುಸಂಗೋಪನೆ ಸಚಿವರು

ಅನುಬಂಧ 1

| ಜಿಲ್ಲಾವಾರು ಗ್ರಾಮೀಣ ಮತ್ತು ತಾಲ್ಲೂಕು ಮಟ್ಟದ ಪಶುವೈದ್ಯಕೀಯ ಆಸ್ಪತ್ರೆಗಳ ವಿವರ | | | | | |
|---|---|---|---|---|---|
| ಕ್ರ.ಸಂ | ಜಿಲ್ಲೆ | ರಾಜ್ಯದಲ್ಲಿರುವ ಗ್ರಾಮೀಣ ಪಶು ವೈದ್ಯಕೀಯ ಆಸ್ಪತ್ರೆಗಳು | ರಾಜ್ಯದಲ್ಲಿರುವ ತಾಲ್ಲೂಕು ಮಟ್ಟದ | | ಒಟ್ಟು |
| | | | ಪಶುವೈದ್ಯಕೀಯ ಆಸ್ಪತ್ರೆಗಳು | ಸಂಚಾರಿ ಪಶು ಚಿಕಿತ್ಸಾಲಯ | |
| 1 | ಬೆಂಗಳೂರು ನಗರ | 92 | 4 | 4 | 100 |
| 2 | ಬೆಂಗಳೂರು ಗ್ರಾಮಾಂತರ | 94 | 4 | 4 | 102 |
| 3 | ಚಿತ್ರದುರ್ಗ | 143 | 6 | 6 | 155 |
| 4 | ಚಿಕ್ಕಬಳ್ಳಾಪುರ | 94 | 6 | 6 | 106 |
| 5 | ದಾವಣಗೆರೆ | 144 | 5 | 5 | 154 |
| 6 | ಕೋಲಾರ | 102 | 5 | 5 | 112 |
| 7 | ರಾಮನಗರ | 111 | 4 | 4 | 119 |
| 8 | ಶಿವಮೊಗ್ಗ | 156 | 7 | 7 | 170 |
| 9 | ತುಮಕೂರು | 228 | 10 | 10 | 248 |
| 10 | ಚಾಮರಾಜನಗರ | 74 | 4 | 4 | 82 |
| 11 | ಚಿಕ್ಕಮಗಳೂರು | 126 | 7 | 7 | 140 |
| 12 | ದಕ್ಷಿಣ ಕನ್ನಡ | 101 | 5 | 5 | 111 |
| 13 | ಹಾಸನ | 203 | 8 | 8 | 219 |
| 14 | ಕೊಡಗು | 67 | 3 | 3 | 73 |
| 15 | ಮೈಸೂರು | 173 | 7 | 7 | 187 |
| 16 | ಮಂಡ್ಯ | 204 | 7 | 7 | 218 |
| 17 | ಉಡುಪಿ | 82 | 3 | 3 | 88 |
| 18 | ಬೆಳಗಾವಿ | 250 | 10 | 10 | 270 |
| 19 | ಬಾಗಲಕೋಟೆ | 130 | 6 | 6 | 142 |
| 20 | ಧಾರವಾಡ | 101 | 5 | 5 | 111 |
| 21 | ಗದಗ | 76 | 5 | 5 | 86 |
| 22 | ಹಾವೇರಿ | 131 | 7 | 7 | 145 |
| 23 | ಉತ್ತರ ಕನ್ನಡ | 121 | 11 | 11 | 143 |
| 24 | ವಿಜಯಪುರ | 130 | 5 | 5 | 140 |
| 25 | ಬಳ್ಳಾರಿ | 135 | 8 | 8 | 151 |
| 26 | ಬೀದರ್ | 103 | 5 | 5 | 113 |
| 27 | ಕೊಪ್ಪಳ | 73 | 4 | 4 | 81 |
| 28 | ಕಲಬುರ್ಗಿ | 199 | 7 | 7 | 213 |
| 29 | ರಾಯಚೂರು | 95 | 5 | 5 | 105 |
| 30 | ಯಾದಗಿರಿ | 92 | 3 | 3 | 98 |
| | ರಾಜ್ಯ ಒಟ್ಟು | **3830** | **176** | **176** | **4182** |

# ಅನುಬಂಧ – 2

| ಕ್ರ.ಸಂ. | ಪದನಾಮ | ಮಂಜೂರು | ಭರ್ತಿ | ಖಾಲಿ |
|---|---|---|---|---|
| 1 | ಉಪ ನಿರ್ದೇಶಕರು (ಪಾಲಿಕ್ಲಿನಿಕ್) | 30 | 19 | 11 |
| 2 | ಸಹಾಯಕ ನಿರ್ದೇಶಕರು | 176 | 176 | 0 |
| 3 | ಮುಖ್ಯ ಪಶುವೈದ್ಯಾಧಿಕಾರಿ * | 509 | 650 | 0 |
| 4 | ಮುಖ್ಯ ಪಶುವೈದ್ಯಾಧಿಕಾರಿ(ವಿಷಯ ತಜ್ಞರು) | 30 | 30 | 0 |
| 5 | ಹಿರಿಯ ಪಶುವೈದ್ಯಾಧಿಕಾರಿ | 970 | 817 | 153 |
| 6 | ಹಿರಿಯ ಪಶುವೈದ್ಯಾಧಿಕಾರಿ (ವಿಷಯ ತಜ್ಞರು) | 30 | 15 | 15 |
| 7 | ಪಶುವೈದ್ಯಾಧಿಕಾರಿ | 1572 | 544 | 1028 |
| 8 | ಪಶುವೈದ್ಯಾಧಿಕಾರಿ (ವಿಷಯ ತಜ್ಞರು) | 30 | 20 | 10 |
| 9 | ಜಾನುವಾರು ಅಭಿವೃದ್ಧಿ ಅಧಿಕಾರಿ | 227 | 142 | 85 |
| 10 | ಜಾನುವಾರು ಅಧಿಕಾರಿ | 500 | 358 | 142 |
| 11 | ಹಿರಿಯ ಪಶುವೈದ್ಯಕೀಯ ಪರೀಕ್ಷಕರು | 1825 | 1405 | 420 |
| 12 | ಪಶುವೈದ್ಯಕೀಯ ಪರೀಕ್ಷಕರು | 1847 | 1294 | 553 |
| 13 | ಪಶುವೈದ್ಯಕೀಯ ಸಹಾಯಕರು | 2144 | 1194 | 950 |
| 14 | ವೆಟರಿನರಿ ಅಟೆಂಡೆಂಟ್ / ಗ್ರೂಪ್ ಡಿ | 7363 | 2100 | 5263 |

* ಕ್ರ.ಸಂ 3 ಕ್ಕೆ ಸಂಬಂಧಪಟ್ಟಂತೆ ಹೊಂದಾಣಿಕೆ ಹುದ್ದೆಗಳು ಹೆಚ್ಚುವರಿ

ನಿರ್ದೇಶಕರು